## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\105\2016\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:10/10/2018

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ: ದೂರುದಾರರಾದ ಶ್ರೀ.ಟಿ.ಎಂ.ಅಂಜನಪ್ಪ, #15, 23ನೇ ಅಡ್ಡ ರಸ್ತೆ, ಟಿ.ದಾಸರಹಳ್ಳಿ, ಬೆಂಗಳೂರು ರವರ ದೂರನ್ನು ಪರಿಹರಿಸುವ ಬಗ್ಗೆ.

*********

ಬೆಂಗಳೂರು ನಗರ ಟಿ.ದಾಸರಹಳ್ಳಿ 23ನೇ ಅಡ್ಡ ರಸ್ತೆ #15ರ ನಿವಾಸಿಯಾದ ಶ್ರೀ.ಟಿ.ಎಂ.ಅಂಜನಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕ್ ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿ (ಇನ್ನು ಮುಂದೆ '1ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕ್ ತೊರನಹಳ್ಳಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರು ಮತ್ತು ಕರವಸೂಲಿಗಾರರು ಸರ್ಕಾರಿ ಸರ್ವೆ ನಂ.197ನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು, ಸಾಲ ಪಡೆದು ಸರ್ಕಾರಕ್ಕೆ ದ್ರೋಹ ಮಾಡಿದ್ದಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ವರದಿಯನ್ನು ಸಲ್ಲಿಸುವಂತೆ ಕೋಲಾರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಂದ ವರದಿಯನ್ನು ಕೇಳಲಾಗಿ, 1ನೇ ಎದುರುದಾರರು ತಮ್ಮ ವರದಿಗಳಲ್ಲಿ-

> ತೊರನಹಳ್ಳಿ ಗ್ರಾಮ ಪಂಚಾಯತ್‌ನ ಸರ್ವೆ ನಂ.197ರಲ್ಲಿ ಸರ್ಕಾರಿ ಮುಜರಾಯಿ ಜಮೀನನ್ನು ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರ ಹೆಸರಿನಲ್ಲಿ ಅಕ್ರಮ ಖಾತೆ ಮಾಡಿ, 2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿ ಮನೆ ಮಂಜೂರಾತಿ ನೀಡಿ, ನಾಲ್ಕು ಹಂತದಲ್ಲಿ ಒಟ್ಟು ₹60,000/- ಸಹಾಯ ಧನ ಪಾವತಿ ಮಾಡಿರುವ ಮತ್ತು ಕರ ವಸೂಲಿಗಾರರ ಪತ್ನಿಯಾದ ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರು ಸರ್ವೆ ನಂ.197ರಲ್ಲಿ 2010-11ರ ಬಸವ ವಸತಿ ಯೋಜನೆ ಅಡಿ ₹49,500/- ಸಹಾಯ ಧನ ಪಡೆದಿದ್ದಾರೆ. ಈ ಹಿನ್ನೆಲೆಯಲ್ಲಿ ತೊರನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ 2006-07ನೇ ಸಾಲಿನಲ್ಲಿ

ಕಾರ್ಯನಿರ್ವಹಿಸಿರುವ ಶ್ರೀ.ಸುರೇಶ್ ಕುಮಾರ್ ಮತ್ತು 2010–11ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿರುವ ಶ್ರೀ.ವಿ.ನಾರಾಯಣಸ್ವಾಮಿ ರವರು ಗ್ರಾಮ ಠಾಣಾ ಜಾಗವನ್ನು ಅಕ್ರಮವಾಗಿ ಫಲಾನುಭವಿಗಳಿಗೆ ಖಾತೆ ಮಾಡಿ, ವಸತಿ ಯೋಜನೆ ಅಡಿ ಪಾವತಿಸಿರುವ ಮೊತ್ತವನ್ನು ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿ \ ಕಾರ್ಯದರ್ಶಿರವರಿಂದ ವಸೂಲಿ ಮಾಡಿ, ನಿಗಮದ ಖಾತೆಗೆ ಜಮಾ ಮಾಡಲು ಸೂಚಿಸಿ, ಈಗಾಗಲೇ ಅಕ್ರಮವಾಗಿ ಮಾಡಿರುವ ಖಾತೆಯನ್ನು ರದ್ದುಪಡಿಸಲು ಹಾಗೂ ಸದರಿಯವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ, ಜಿಲ್ಲಾ ಪಂಚಾಯತ್‌ಗೆ ಸಲ್ಲಿಸಲು ತಮಗೆ ನಿರ್ದೇಶನ ನೀಡಿದ್ದಾರೆಂದು ಹೇಳಿದ್ದಾರೆ.

4. ವರದಿಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರು 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿ ಪಡೆದ ತಲಾ ₹30,000/– ಮತ್ತು ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರು 2010–11ರ ಬಸವ ವಸತಿ ಯೋಜನೆ ಅಡಿ ಪಡೆದ ₹49,500/– ಸಹಾಯ ಧನವನ್ನು ಹಂತ ಹಂತವಾಗಿ ಸರ್ಕಾರಕ್ಕೆ ಸಲ್ಲಿಸುವುದಾಗಿ ಹೇಳಿ ದಿನಾಂಕ:07/09/17ರ ಡಿ.ಡಿ ಗಳ ಮುಖಾಂತರ ತಲಾ ₹2,500/–ರಂತೆ ಸರ್ಕಾರಕ್ಕೆ ಹಿಂದಿರುಗಿಸಿದ್ದಾರೆ. ಉಳಿದ ಹಣವನ್ನು ಹಂತ ಹಂತವಾಗಿ ಕಟ್ಟುವುದಾಗಿ ಪತ್ರವನ್ನು ಬರೆದಿದ್ದಾರೆಂದು ಹೇಳಿದ್ದಾರೆ.

5. ಒಂದನೇ ಎದುರುದಾರರ ವರದಿಯ ಆಧಾರದ ಮೇಲೆ ತೊರನಹಳ್ಳಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯಾದ ಶ್ರೀ.ಎಂ.ಸುರೇಶ್ ಕುಮಾರ್ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶ್ರೀ.ವಿ.ನಾರಾಯಣಸ್ವಾಮಿ ರವರುಗಳನ್ನು 2 ಮತ್ತು 3ನೇ ಎದುರುದಾರರುಗಳನ್ನಾಗಿ ಮುಖಪುಟದಲ್ಲಿ ಸೇರಿಸಿ, ಸದರಿಯವರುಗಳಿಂದ ವರದಿಗೆ ಆಕ್ಷೇಪಣೆಯನ್ನು ಕೇಳಲಾಯಿತು.

6. ಎರಡು (2) ಮತ್ತು 3ನೇ ಎದುರುದಾರರುಗಳು ತಮ್ಮ ಆಕ್ಷೇಪಣೆಗಳಲ್ಲಿ –

ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಯೋಜನೆ ಅಡಿ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರ ತಮಗಿಲ್ಲ, ಆಯ್ಕೆಯಾದ ಫಲಾನುಭವಿಗಳ ಪಟ್ಟಿಯನ್ನು ಸರ್ವ ಸದಸ್ಯರ ಸಾಮಾನ್ಯ ಸಭೆಯಲ್ಲಿ ಮಂಡಿಸಿ, ಅನುಮೋದಿಸಿ, ನಂತರ ತಾಲ್ಲೂಕ್ ಪಂಚಾಯತ್‌ಗೆ ಅನುಮೋದನೆಗಾಗಿ ಕಳುಹಿಸಿ ಕೊಡಲಾಗುತ್ತದೆ. ಮುಂದುವರೆದು, ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರಿಗೆ ಮಂಜೂರಾದ ಸಹಾಯಧನ ದಿನಾಂಕ:23/12/12, 25/04/12, 28/06/12 ಮತ್ತು 29/04/15ರ

N. Anand

ಬಿಲ್ಲುಗಳಲ್ಲಿ ಪಾವತಿಸಲಾಗಿದೆ. ಸದರಿ ದಿನಾಂಕಗಳಲ್ಲಿ ತಾವು ಹೆಚ್.ಹೊಸಕೋಟೆ ಗ್ರಾಮ ಪಂಚಾಯತ್‌ನಲ್ಲಿ ಕಾರ್ಯನಿರ್ವಹಿಸಿದೆಯೆಂದು 3ನೇ ಎದುರುದಾರರು ಹೇಳಿದ್ದಾರೆ.

7. ಎರಡು(2) ಮತ್ತು 3ನೇ ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸದೇ, ಸರ್ಕಾರಿ ಜಾಗವನ್ನು ಮನೆ ಕಟ್ಟಲು ಮಂಜೂರು ಮಾಡಿರುವುದು ಕಾನೂನಿಗೆ ವಿರುದ್ಧವಾಗಿದ್ದು, ದಾಖಲೆಗಳನ್ನೆಲ್ಲಾ ಬದಿಗಿಟ್ಟು ಸರ್ಕಾರಿ ಜಾಗವನ್ನು ಮಂಜೂರು ಮಾಡಿದವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬೇಕೆಂದು ಹೇಳಿದ್ದಾರೆ.

8. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ತೊರನಹಳ್ಳಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದ ಲೇಟ್.ಬಸವರಾಜಪ್ಪ ರವರ ಸೊಸೆಯಂದಿರಾದ ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರಿಗೆ 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿ ಮನೆಗಳು ಮಂಜೂರಾಗಿ ಸದರಿಯವರಿಗೆ ತಲಾ ₹30,000/–ಗಳ ಸಹಾಯ ಧನ ಹಾಗೂ ಸದರಿ ಪಂಚಾಯತ್‌ನ ಕರವಸೂಲಿಗಾರರ ಪತ್ನಿ ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರಿಗೆ 2010–11ನೇ ಸಾಲಿನ ಬಸವ ವಸತಿ ಯೋಜನೆ ಅಡಿ ಮನೆ ಮಂಜೂರಾಗಿ ಸದರಿಯವರಿಗೆ ₹49,500/–ಗಳ ಸಹಾಯ ಧನ ನೀಡಲಾಗಿದೆ ಮತ್ತು ಆ ಅವಧಿಯಲ್ಲಿ ಕ್ರಮವಾಗಿ, 2 ಮತ್ತು 3ನೇ ಎದುರುದಾರರು ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆಂದು 1ನೇ ಎದುರುದಾರರು ಕೋಲಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಸಲ್ಲಿಸಿದ ದಿನಾಂಕ:22/12/16ರ ವರದಿಯಲ್ಲಿ ಕಂಡು ಬಂದಿದೆ. ಸದರಿ ಮನೆಗಳನ್ನು ಸರ್ಕಾರಿ ಸರ್ವೆ ನಂ.197ರಲ್ಲಿ ಕಟ್ಟಲಾಗಿದೆಯೆಂದು ಸದರಿ ವರದಿಯಲ್ಲಿ ಹೇಳಿದೆ. ಸದರಿ ವರದಿಯನ್ನಾಧರಿಸಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ಜ್ಞಾಪನ ಸಂಖ್ಯೆ:ಜಿಪಂಕೋ\ಅಭಿವೃದ್ಧಿ\ಲೋಕಾಯುಕ್ತ\ಸಿ.ಆರ್.10\15–16 ದಿ:24/06/17ರಲ್ಲಿ ಗ್ರಾಮ ಠಾಣಾ ಜಾಗವನ್ನು ಅಕ್ರಮವಾಗಿ ಫಲಾನುಭವಿಗಳಿಗೆ ಖಾತೆ ಮಾಡಿ, ವಸತಿ ಯೋಜನೆ ಅಡಿ ಪಾವತಿಸಿರುವ ಮೊತ್ತವನ್ನು 2 ಮತ್ತು 3ನೇ ಎದುರುದಾರರಿಂದ ವಸೂಲಿ ಮಾಡಿ, ನಿಗಮದ ಖಾತೆಗೆ ಜಮಾ ಮಾಡುವಂತೆ ಸೂಚಿಸಿ, ಅಕ್ರಮವಾಗಿ ಮಾಡಿರುವ ಖಾತೆಯನ್ನು ರದ್ದುಪಡಿಸಲು ಹಾಗೂ ಸದರಿಯವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ಸೂಚಿಸಿದ್ದಾರೆ. ಆದರೆ, ಖಾತೆ ರದ್ದುಪಡಿಸಿದ ಬಗ್ಗೆ ಹಾಗೂ 2 ಮತ್ತು 3ನೇ ಎದುರುದಾರರಿಂದ ಹಣ ವಸೂಲಿ ಮಾಡಿದ ಬಗ್ಗೆ ಮತ್ತು ಸದರಿಯವರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ ಬಗ್ಗೆ ಮಾಹಿತಿ ಲಭ್ಯವಿಲ್ಲ;

N. Sreenath

2) 2006–07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆ ಅಡಿ ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರನ್ನು ಫಲಾನುಭವಿಗಳನ್ನಾಗಿ ಆಯ್ಕೆ ಮಾಡುವ ಸಮಯದಲ್ಲಿ ದೂರಿನ 2 ಮತ್ತು 3ನೇ ಎದುರುದಾರರು ಕ್ರಮವಾಗಿ, ತೊರನಹಳ್ಳಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದು, ಸದರಿ ಇಬ್ಬರು ಫಲಾನುಭವಿಗಳು ಗ್ರಾಮ ಪಂಚಾಯತ್‌ನ ಅಂದಿನ ಅಧ್ಯಕ್ಷರಾದ ಲೇಟ್.ಬಸವರಾಜಪ್ಪ ರವರ ಸೊಸೆಯಂದಿರಾಗಿರುವುದು ಗಮನಾರ್ಹ ಅಂಶವಾಗಿದೆ. ಸದರಿಯವರಿಗೆ ಮನೆಗಳು ಮಂಜೂರಾಗಿ ಕಂತುಗಳಲ್ಲಿ ತಲಾ ₹30,000/– ಬಿಡುಗಡೆಯಾಗುವ ಸಂದರ್ಭದಲ್ಲಿ 2ನೇ ಎದುರುದಾರರೇ ಪಂಚಾಯತ್‌ನ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದರು;

3) 2010–11ನೇ ಸಾಲಿನ ಬಸವ ವಸತಿ ಯೋಜನೆ ಅಡಿ ಗ್ರಾಮ ಪಂಚಾಯತ್‌ನ ಕರವಸೂಲಿಗಾರರ ಪತ್ನಿ ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರನ್ನು ಫಲಾನುಭವಿಯನ್ನಾಗಿ ಆಯ್ಕೆ ಮಾಡುವ ಸಮಯದಲ್ಲಿ ದೂರಿನ 3ನೇ ಎದುರುದಾರರು ತೊರನಹಳ್ಳಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಮತ್ತು 2ನೇ ಎದುರುದಾರರು ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದಾರೆ;

4) ಸರ್ಕಾರದ ಆಶ್ರಯ \ ವಸತಿ ಯೋಜನೆ ಅಡಿ ಫಲಾನುಭವಿಗಳನ್ನು ಆಯ್ಕೆ ಮಾಡಿ ತಾಲ್ಲೂಕ್ ಪಂಚಾಯತ್‌ಗೆ ಅನುಮೋದನೆಯನ್ನು ಕಳುಹಿಸುವ ಮೊದಲು ಸದರಿ ಫಲಾನುಭವಿಗಳು ಅರ್ಹರೆ ಅಥವಾ ಅನರ್ಹರೆ ಎಂಬ ಅಂಶವನ್ನು ತಾಲ್ಲೂಕ್ ಪಂಚಾಯತ್‌ನ ಗಮನಕ್ಕೆ ಪಂಚಾಯತ್ ಕಾರ್ಯದರ್ಶಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿದ್ದ 2 ಮತ್ತು 3ನೇ ಎದುರುದಾರರ ಕರ್ತವ್ಯವಾಗಿದ್ದು, ಸದರಿ ಫಲಾನುಭವಿಗಳು ಪಂಚಾಯತ್‌ನ ಅಧ್ಯಕ್ಷರ ಸೊಸೆಯಂದಿರು ಮತ್ತು ಕರ ವಸೂಲಿಗಾರರ ಪತ್ನಿ ಎಂಬ ಸಂಗತಿ 2 ಮತ್ತು 3ನೇ ಎದುರುದಾರರ ಗಮನಕ್ಕೆ ಬಾರದಿರಲು ಯಾವುದೇ ಕಾರಣಗಳು ಕಂಡು ಬಂದಿಲ್ಲ. ಸದರಿ ಫಲಾನುಭವಿಗಳ ಪಟ್ಟಿಯು ತಾಲ್ಲೂಕ್ ಪಂಚಾಯತ್‌ನಲ್ಲಿ ಅನುಮೋದನೆಗೊಂಡು 3 ಫಲಾನುಭವಿಗಳಿಗೆ ವಸತಿ ನಿಗಮದಿಂದ ಸಹಾಯಧನ ಬಿಡುಗಡೆಯಾಗಿದೆ. ಅನರ್ಹ ಫಲಾನುಭವಿಗಳಿಗೆ ಫಲಾನುಭವಿಗಳನ್ನು ಗುರುತಿಸಿ, ಪಟ್ಟಿಯನ್ನು ತಾಲ್ಲೂಕ್ ಪಂಚಾಯತ್‌ನ ಅನುಮೋದನೆಗೆ ಕಳುಹಿಸಿ, 2 ಮತ್ತು 3ನೇ ಎದುರುದಾರರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

9. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 2ನೇ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

N. Anand

10. ಆದ್ದರಿಂದ, ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರುಗಳಿಂದ ತಲಾ ₹30,000/- ಹಾಗೂ ಶ್ರೀಮತಿ.ಲಲಿತಾ ಕೋಂ ಶ್ರೀನಿವಾಸ್ ರವರಿಂದ ₹49,500/-ಗಳನ್ನು ಬಡ್ಡಿ ಸಮೇತ ವಸೂಲಿ ಮಾಡಲು ಮತ್ತು ತೊರನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಸರ್ವೆ ನಂ.197ರಲ್ಲಿ ಶ್ರೀಮತಿ.ಅಂಬಿಕಾ ಕೋಂ ಲೇಟ್.ಶಂಕರ್ ಮತ್ತು ಶ್ರೀಮತಿ.ಶಕುಂತಲಾ ಕೋಂ ರಾಚಯ್ಯ ರವರ ಹೆಸರಿಗೆ ಮಾಡಲಾದ ಅಕ್ರಮ ಖಾತೆಯನ್ನು ರದ್ದುಪಡಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 12/10

**(ನ್ಯಾಯಾಮೂರ್ತಿ ಎನ್.ಆನಂದ)**
**ಉಪಲೋಕಾಯುಕ್ತ,**
**ಕರ್ನಾಟಕ ರಾಜ್ಯ.**

10/10